ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**403**
ವಿಧಾನ ಪರಿಷತ್ತು ಸದಸ್ಯರ ಹೆಸರು	:	**ಶ್ರೀ. ಸುನೀಲ್ ವಲ್ಯಾಪುರ್ (ವಿಧಾನ ಸಭೆಯಿಂದ ಚುನಾಯಿತರಾದವರು)**
ಉತ್ತರಿಸುವ ಸಚಿವರು	:	**ಮಾನ್ಯ ತೋಟಗಾರಿಕೆ ಹಾಗೂ ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.**
ಉತ್ತರಿಸಬೇಕಾದ ದಿನಾಂಕ	:	**18.02.2022.**

ಪ್ರಶ್ನೆ	ಉತ್ತರ
ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಲ್ಲಿರುವ ಪಾಲಿಹೌಸ್ ಗಳ ಸಂಖ್ಯೆ ಎಷ್ಟು: (ತಾಲ್ಲೂಕುವಾರು ವಿವರ ನೀಡುವುದು)	ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಲ್ಲಿರುವ ಪಾಲಿಹೌಸ್ ಗಳ ಸಂಖ್ಯೆ 19. ತಾಲ್ಲೂಕುವಾರು ವಿವರ ಈ ಕೆಳಕಂಡತಿವೆ. (ಕೆಳಗಿನ ಕೋಷ್ಟಕ)

ಕಲಬುರಗಿ ಜಿಲ್ಲೆ		**ಯಾದಗಿರಿ ಜಿಲ್ಲೆ**	
ತಾಲ್ಲೂಕು	ಸಂಖ್ಯೆ	ತಾಲ್ಲೂಕು	ಸಂಖ್ಯೆ
ಅಫಜಲಪೂರ	1	ಯಾದಗಿರಿ	2
ಆಳಂದ	7	ಶಹಾಪೂರ	2
ಕಲಬುರಗಿ	3	ಸುರಪುರ	3
ಸೇಡಂ	1		
ಚಿಂಚೋಳಿ	0		
ಚಿತ್ತಾಪೂರ	0		
ಜೇವರ್ಗಿ	0		
ಒಟ್ಟು	**12**	**ಒಟ್ಟು**	**7**
ಒಟ್ಟು 19			

ಪ್ರಶ್ನೆ	ಉತ್ತರ
ಪಾಲಿಹೌಸ್ ಗಳಿಗೆ ಸರ್ಕಾರ ನೀಡುತ್ತಿರುವ ಪ್ರೋತ್ಸಾಹ ಧನವೆಷ್ಟು: (ವಿವರ ನೀಡುವುದು)	ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಪಾಲಿಹೌಸ್‌ನ ಪ್ರತಿ ಚದರ ಮೀಟರ್ ಘಟಕ ವೆಚ್ಚ ರೂ.791 ರಂತೆ 0.4 ಹೆಕ್ಟೇರ್ ವರೆಗೆ ಶೇಕಡ 50% ರಷ್ಟು ಸಹಾಯಧನವನ್ನು ರೈತರಿಗೆ ನೀಡಲಾಗುತ್ತಿದೆ.
ಪ್ರೋತ್ಸಾಹ ಧನ ನೀಡಲು ಅನುಸರಿಸುವ ಮಾನದಂಡಗಳೇನು? (ವಿವರ ನೀಡುವುದು)	ಪ್ರೋತ್ಸಾಹಧನ ನೀಡಲು ಅನುಸರಿಸುವ ಮಾನದಂಡಗಳು ಈ ಕೆಳಕಂಡಂತಿವೆ. 1) ಫಲಾನುಭವಿಗಳು ರೈತರಾಗಿದ್ದು ಜಮೀನು ಅವರ ಹೆಸರಿನಲ್ಲಿರಬೇಕು. 2) ಜಂಟಿ ಖಾತೆಯಾಗಿದ್ದಲ್ಲಿ ಇತರೆ ಖಾತೆದಾರರ ಒಪ್ಪಿಗೆ ಪತ್ರ ಪಡೆದಿರಬೇಕು (Notary ರವರಿಂದ ದೃಢೀಕರಣ ಮಾಡಿಸಬೇಕು). 3) ತಂದೆ ಅಥವಾ ತಾಯಿ ಹೆಸರಿನಲ್ಲಿ ಜಮೀನಿದ್ದು, ಅವರು ಮರಣ ಹೊಂದಿದ್ದಲ್ಲಿ ಮೃತ್ಯ ಮರಣ ಪತ್ರ-ಸಕ್ಷಮ ಪ್ರಾಧಿಕಾರದಿಂದ, ಗ್ರಾಮ ಲೆಕ್ಕಿಗರಿಂದ ದೃಢೀಕರಿಸಿ, ಕುಟುಂಬದ ಇತರೆ ಸದಸ್ಯರಿಂದ ಒಪ್ಪಿಗೆ ಪಡೆದು ತಮ್ಮ ಹೆಸರಿನಲ್ಲಿ ಅರ್ಜಿ ಸಲ್ಲಿಸುವುದು.

4) ಮಹಿಳೆಯ ಹೆಸರಿನಲ್ಲಿ ಖಾತೆ ಹೊಂದಿದ್ದು, ಕುಟುಂಬದ ಇತರೆ ಪುರುಷ ಸದಸ್ಯರ ಹೆಸರಿನಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ ಯಾವುದೇ ಕಾರಣಕ್ಕೂ ಮಾನ್ಯ ಮಾಡಬಾರದು. ಮಹಿಳೆಯರ ಹೆಸರಿನಲ್ಲಿಯೇ ಅರ್ಜಿ ಸಲ್ಲಿಸುವುದನ್ನು ಉತ್ತೇಜಿಸಬೇಕು.

5) ಫಲಾನುಭವಿಗಳು ತೋಟಗಾರಿಕೆ ಬೆಳೆಗಳನ್ನು ಬೆಳೆಯುವ ರೈತರಾಗಿರಬೇಕು ಅಥವಾ ತೋಟಗಾರಿಕೆ ಬೆಳೆ ಬೆಳೆಯುವ ಆಸಕ್ತಿ ಹೊಂದಿರಬೇಕು.

HORTI 75 HGM 2022

(ಮುನಿರತ್ನ)
ತೋಟಗಾರಿಕೆ ಹಾಗೂ ಯೋಜನೆ,
ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಸಚಿವರು